ಶ್ರೀ ಆರ್. ವಿ. ದೇಶಪಾಂಡೆ :– ರೆಸ್ಟಿಂಗ್ ಸ್ಕೂಲ್ ಬಗ್ಗೆ ಪ್ರಪೋಸಲ್ ಇದೆ. ಆದರೆ ನಿಮ್ಮ ಇಲಾಖೆಯಲ್ಲಿ ಹಣ ಇಲ್ಲ ಎಂದು ಕಳೆದ ಎರಡು ಮೂರು ವರ್ಷಗಳಿಂದ ಹಾಗೆಯೇ ಉಳಿದಿದೆ.

ಶ್ರೀ ಎಸ್. ರಮೇಶ್ :– ಈ ಪ್ರಸ್ತಾವನೆ ಸರಕಾರದ ಮುಂದೆ ಬಂದಿದೆ. ಹಣಕಾಸಿನ ಸೌಲಭ್ಯ ನೋಡಿಕೊಂಡು ಇದನ್ನು ಆದಷ್ಟು ಬೇಗನೆ ಮಾಡುತ್ತೇವೆ.

ವಿಷಯ :– ವೃದ್ಧಾಪ್ಯ ವೇತನದ ವಿತರಣೆ ಹಾಗೂ ಮಂಜೂರಾತಿಯಲ್ಲಿ ವಿಳಂಬ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೬೫ (೬೦೩)

ಶ್ರೀ ಪಿ. ಜಿ ಆರ್. ಸಿಂಧ್ಯ (ಕನಕಪುರ)

ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ–

ಅ) ವೃದ್ಧಾಪ್ಯ ವೇತನ ಸಂದಾಯ ಮಾಡುವಲ್ಲಿ ಹಾಗೂ ಮಂಜೂರು ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ?

ಆ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರದವರು ಯಾವ ಕ್ರಮಗಳನ್ನು ತೆಗೆದುಕೊಳ್ಳಲು ಯೋಚಿಸಿದ್ದಾರೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು)

ಅ) ವೃದ್ಧಾಪ್ಯ ವೇತನ ಮಂಜೂರು ಹಾಗೂ ಸಂದಾಯ ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ವೃದ್ಧಾಪ್ಯ ವೇತನವನ್ನು ಮಂಜೂರು ಮಾಡುವ ಹಾಗೂ ಸಂದಾಯ ಮಾಡುವ ಕಾರ್ಯವನ್ನು ಹೆಚ್ಚಿನ ಪ್ರಾಶಸ್ತ್ಯದ ಮೇಲೆ ಮಾಡಲಾಗುತ್ತಿದೆ

ಶ್ರೀ ಪಿ. ಜಿ. ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಈ ಅಧಿವೇಶನ ಪ್ರಾರಂಭವಾದಾಗಿನಿಂದ ಸಹಿತ ಮತ್ತು ಈ ವಿಧಾನಸಭೆ ಅಧಿವೇಶನ ರಚನೆಯಾದ ಮೇಲೆ ಅಂದರೆ ಕಳೆದ ಒಂದು ವರ್ಷದಿಂದಲೂ ನಾನು ಈ ಒಂದು ಪ್ರಶ್ನೆಯನ್ನು ಸತತವಾಗಿ ಸರ್ಕಾರಕ್ಕೆ ಕೇಳುತ್ತಿದ್ದೇನೆ. ಈ ವೃದ್ಧಾಪ್ಯ ವೇತನ ವಿತರಣೆ ಸರಿಯಾಗಿ ಆಗುತ್ತಿಲ್ಲ. ಮೂರು ತಿಂಗಳು ನಾಲ್ಕು ತಿಂಗಳು ಬಡವರಿಗೆ ಈ ವೃದ್ಧಾಪ್ಯ ವೇತನ ಸಿಗುತ್ತಿಲ್ಲ. ಇದು ತಮಗೂ ಜ್ಞಾಪಕದಲ್ಲಿರಬಹುದು. ಕಳೆದ ಮೂರು ಅಧಿವೇಶನಗಳು ಸೇರಿದಾಗಲೂ ಸಹ ಈ ವಿಷಯವನ್ನು ಹೇಳಿದ್ದೇನೆ. ಆದರೂ ಸರ್ಕಾರದವರು ಇದು ನಮ್ಮ ಗಮನಕ್ಕೆ ಬಂದಿಲ್ಲವೆಂದು ಇಲ್ಲಿ ಉತ್ತರ ಕೊಟ್ಟಿದ್ದಾರೆ. ನಾನು ಸರ್ಕಾರದ ಗಮನಕ್ಕೆ ಹೇಗೆ ತರುವುದೆಂದು ನನಗೇ ಗೊತ್ತಾಗುತ್ತಿಲ್ಲ. ತಾವು ಕಳೆದ ಎಲ್ಲಾ ಅಧಿವೇಶನಗಳ ವರದಿಗಳನ್ನು ಬೇಕಾದರೆ ತೆಗೆಸಿ ನೋಡಿ. ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೋ ಇಲ್ಲವೋ ಎಂದು ತಮಗೆ ತಿಳಿಯುತ್ತದೆ. ಈ

ಒಂದು ಕೆಲಸ ಸರ್ಕಾರ ಮೊದಲು ಮಾಡಲಿ ಎನ್ನುವ ಮಾತನ್ನೂ ಸಹ ನಾನು ಹೇಳಿದ್ದೇನೆ. ಆದರೂ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದರೆ ನಾವು ಪ್ರಶ್ನೆಗಳನ್ನು ಏತಕ್ಕೆ ಕಳುಹಿಸಬೇಕು ಇನ್ನು ಯಾವ ರೀತಿಯಲ್ಲಿ ಸರ್ಕಾರದ ಗಮನಕ್ಕೆ ನಾವು ವಿಷಯಗಳನ್ನು ತರಬೇಕು ಎನ್ನುವುದನ್ನು ಮಾನ್ಯ ಸಚಿವರು ನಮಗೆ ಹೇಳಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೇ ಈಗ ನನ್ನ ಗಮನಕ್ಕೆ ಬಂದಿದೆ. ನಾನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಹೇಳಿ ಎಲ್ಲಿ ಡಿಲೇ ಆಗಿದೆ ಅಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೇ, ನಾನು ಕಳೆದ ಒಂದು ವರ್ಷದಿಂದಲೂ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಈ ವಿಷಯವನ್ನು ಹಿಂದಿನ ಹಣಕಾಸಿನ ಸಚಿವರ ಗಮನಕ್ಕೂ ಸಹ ತಂದಿದ್ದೇನೆ. ಅವರಿಗೆ ಜ್ಞಾಪಕ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೂ ಸಹ ನನ್ನ ಗಮನಕ್ಕೆ ಬಂದಿಲ್ಲ ಎಂದು ಏತಕ್ಕೆ ಉತ್ತರ ಕೊಡುತ್ತಾರೆ. ಈ ಉತ್ತರ ಕೊಡುವ ಮುನ್ನ ಮಾನ್ಯ ಮಂತ್ರಿಗಳು ಅಪ್ರೂವ್ ಮಾಡಿರುತ್ತಾರೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಸದಸ್ಯರು ಈ ಅಧಿವೇಶನದಲ್ಲಿ ಪ್ರಶ್ನೆ ಕೇಳಿದ್ದಾರೆ ಅದು ನನ್ನ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೇನೆ ಈಗ ನನ್ನ ಗಮನಕ್ಕೆ ತಂದಿದ್ದೀರಿ. ನಾನು ಸಂಬಂಧಪಟ್ಟ ತಹಶೀಲ್ದಾರರಿಗೆ ತಿಳಿಸಿ ಕ್ರಮ ತೆಗೆದುಕೊಳ್ಳಲು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ :–ಮಾನ್ಯ ಅಧ್ಯಕ್ಷರೇ ಅಂತೂ ಮಾನ್ಯ ಮಂತ್ರಿಗಳ ಗಮನಕ್ಕೆ ಈ ವಿಷಯ ತರುವಲ್ಲಿ ನಾನು ಯಶಸ್ವಿಯಾಗಿದ್ದೇನೆ. ಆದ್ದರಿಂದ ನಾನು ಅವರಿಗೆ ತುಂಬಾ ಆಭಾರಿಯಾಗಿದ್ದೇನೆ. ಮಾನ್ಯ ಅಧ್ಯಕ್ಷರೇ, ಈ ವಿಷಯ ತಮಗೂ ಗೊತ್ತಿರತಕ್ಕಂಥಾದ್ದು. ಆದರೆ ಈ ಪ್ರಶ್ನೆ ಒಬ್ಬ ತಹಶೀಲ್ದಾರರಿಗೆ ಒಬ್ಬ ಜಿಲ್ಲಾಧಿಕಾರಿಗಳಿಗೆ ಸಂಬಂಧಪಟ್ಟದ್ದು ಅಲ್ಲ. ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತಹ ಪ್ರಶ್ನೆ ತಮ್ಮ ಕ್ಷೇತ್ರದಲ್ಲಿ ಸಹ ಈ ರೀತಿಯ ಪರಿಸ್ಥಿತಿ ಇರಬಹುದು. ಸುಮಾರು ೩–೪ ತಿಂಗಳು ವೃದ್ಧಾಪ್ಯ ವೇತನ ಸಿಗುವುದಿಲ್ಲ. ಕೆಲವು ಕಡೆ ೬ ತಿಂಗಳು ಆದರೂ ತಡ ಆಗುತ್ತದೆ. ಅಲ್ಲಿ ಈ ಹಣ ತರುವಂತಹ ಪೋಸ್ಟ್ ಮ್ಯಾನ್ ಏನು ಮಾಡುತ್ತಾನೆ ಅಂದರೆ ಒಟ್ಟಿಗೆ ೩೦೦–೪೦೦ ರೂಪಾಯಿಗಳನ್ನು ತೆಗೆದುಕೊಂಡು ಹೋಗಿರುತ್ತಾನೆ. ಅದರಲ್ಲಿ ಅವನು ಸಂಬಂಧಪಟ್ಟವರಿಗೆ ಒಂದು ೨೦೦ ರೂಪಾಯಿ ಕೊಟ್ಟು ಇನ್ನುಳಿದ ೨೦೦ ರೂಪಾಯಿಗಳನ್ನು ಅವನೇ ಇಟ್ಟುಕೊಳ್ಳುತ್ತಾನೆ. ಇವತ್ತು ವೃದ್ಧಾಪ್ಯ ವೇತನ ಪಡೆಯುತ್ತಿರುವ ಕಡು ಬಡವರು ಈ ಪೋಸ್ಟ್ ಮ್ಯಾನ್ ಮರ್ಜಿಯಲ್ಲಿರಬೇಕಾಗಿದೆ. ಇದು ಎಲ್ಲಾ ಕಡೆ ನಡೆಯುತ್ತಿದೆ. ಆದ್ದರಿಂದ ಸರ್ಕಾರವನ್ನು ನಾನು ಕೇಳಿಕೊಳ್ಳುವುದೇನೆಂದರೆ ಈ ವೃದ್ಧಾಪ್ಯ ವೇತನ ಪಡೆಯುವಂಥವರಿಗೆ ಪಾಸ್ ಬುಕ್ ಸಿಸ್ಟಂ ಜಾರಿಗೆ ತಂದು ಹತ್ತಿರದಲ್ಲಿ ಇರುವಂತಹ ಗ್ರಾಮೀಣ

ಬ್ಯಾಂಕ್‌ಗಳಲ್ಲಿ ಒಂದು ಖಾತೆಯನ್ನು ತೆರೆದು ಆ ಖಾತೆಗೆ ಈ ಹಣ ಜಮಾ ಮಾಡುವಂತಹ ವ್ಯವಸ್ಥೆ ಮಾಡಿ. ಇವತ್ತು ಪ್ರತಿ ೨ ಕಿಲೋ ಮೀಟರ್ ೫ ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಒಂದೊಂದು ಗ್ರಾಮೀಣ ಬ್ಯಾಂಕ್‌ಗಳು ಇವೆ. ಗ್ರಾಮೀಣ ಬ್ಯಾಂಕ್‌ಗಳು ಇಲ್ಲದೆ ಇರುವಂತಹ ಕಡೆ ಬೇರೆ ಬ್ಯಾಂಕ್‌ಗಳಲ್ಲಿ ಒಂದು ಅಕೌಂಟ್ ತೆಗೆದು ಅದರಲ್ಲಿ ಆದರೂ ಜಮಾ ಮಾಡುವಂತಹ ವ್ಯವಸ್ಥೆ ಸರ್ಕಾರದವರು ಮಾಡಲಿಕ್ಕೆ ಸಾಧ್ಯತೆ ಇದೆಯೇ ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :–ಇದು ಒಳ್ಳೆಯ ಸಲಹೆ. ಅನೇಕ ಕಡೆ ಗ್ರಾಮೀಣ ಬ್ಯಾಂಕ್‌ಗಳು ಇಲ್ಲ ನಿಮ್ಮ ಕಡೆ ೧೦ ಕಿಲೋ ಮೀಟರ್ ಒಳಗಡೆ ಇರಬಹುದು. ಆದರೆ ನಮ್ಮ ಕಡೆ ೧೦–೧೫ ಕಿಲೋಮೀಟರ್ ದೂರದಲ್ಲಿ ಒಂದೊಂದು ಗ್ರಾಮೀಣ ಬ್ಯಾಂಕ್ ಇದೆ. ಅದು ನಮ್ಮ ಕಡೆ ಸ್ವಲ್ಪ ತೊಂದರೆ ಆಗಬಹುದು. ಅದಕ್ಕೆ ಪೋಸ್ಟ್ ಆಫೀಸ್‌ಗಳಲ್ಲಿ ಒಂದು ಅಕೌಂಟ್ ಓಪನ್ ಮಾಡಿ ಅಲ್ಲಿಗೆ ನೇರವಾಗಿ ಜೆಕ್ ಕಳುಹಿಸಿಕೊಡತಕ್ಕಂಥಾದ್ದನ್ನು ಯೋಚನೆ ಮಾಡಬಹುದು. ನಾನು ಸಮಾಜ ಕಲ್ಯಾಣ ಇಲಾಖೆ ಜೊತೆ ಚರ್ಚೆ ಮಾಡುತ್ತೇನೆ. ತಮ್ಮ ಸಲಹೆಯನ್ನು ನಾನು ಪರಿಶೀಲನೆ ಮಾಡುತ್ತೇನೆ

ಶ್ರೀ ಎಸ್. ಆರ್. ಮೋರೆ :–ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ನನಗೆ ಕೊಟ್ಟಿರತಕ್ಕಂಥ ಉತ್ತರದಲ್ಲಿ ಆ ಉದ್ದೇಶ ಇಲ್ಲ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ಈಗ ಇರತಕ್ಕಂಥ ೫೦ ರೂಪಾಯಿಗಳನ್ನು ಫಿಕ್ಸ್ ಮಾಡಿರುವುದು ಕಳೆದ ೧೨ ವರ್ಷಗಳ ಹಿಂದೆ ಆದರೆ ಇವತ್ತು ಹಣದುಬ್ಬರ ಜಾಸ್ತಿಯಾಗಿ ಹಣದ ಬೆಲೆ ಬಹಳ ಕಡಿಮೆಯಾಗಿದೆ. ರೂಪಾಯಿ ಬೆಲೆ ಸಹ ಬಹಳ ಕಡಿಮೆಯಾಗಿದೆ ಈಗ ಇರತಕ್ಕಂಥ ೫೦ ರೂಪಾಯಿಗಳು ಏನೇನು ಸಾಕಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಇದನ್ನು ೧೦೦ ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ನಮ್ಮ ಹಣಕಾಸಿನ ಪರಿಸ್ಥಿತಿ ಅಷ್ಟು ಸರಿ ಇಲ್ಲ. ಅದನ್ನು ತಿಳಿದುಕೊಂಡು ಸರ್ಕಾರ ಈಗ ಇರತಕ್ಕಂಥ ೫೦ ರೂಪಾಯಿಗಳನ್ನು ೧೦೦ ರೂಪಾಯಿಗಳಿಗೆ ಹೆಚ್ಚು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇವೆ ನಮ್ಮ ಹಣಕಾಸಿನ ಪರಿಸ್ಥಿತಿ ಸರಿಯಾದ ಮೇಲೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಆರ್. ಮೋರೆ :–ಹಣಕಾಸಿನ ಪರಿಸ್ಥಿತಿ ಯಾವಾಗ ಸುಧಾರಣೆ ಆಗುತ್ತದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :–ನಾವು ನೀವು ಸೇರಿ ಸುಧಾರಿಸಿದರೆ ಬಹು ಬೇಗನೆ ಅದಕ್ಕೆ ಪರಿಹಾರ ಸಿಗುತ್ತದೆ.

ಶ್ರೀ ಆರ್. ದಯಾನಂದರಾವ್ :—ಮಾನ್ಯ ಅಧ್ಯಕ್ಷರೇ ಈ ವೃದ್ಧಾಪ್ಯ ವೇತನ ಮಂಜೂರಾಗಿದ್ದರೂ ಸಹ ಅದನ್ನು ಸರಿಯಾಗಿ ಸಕಾಲದಲ್ಲಿ ವಿತರಣೆ ಮಾಡುತ್ತಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ನಿಗಾ ವಹಿಸಿ ಸಕಾಲದಲ್ಲಿ ಅವರಿಗೆ ಹಣ ತಲುಪುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :-ತಾವು ಮತ್ತೊಮ್ಮೆ ಪ್ರಶ್ನೆ ಕೇಳಿ.

ಶ್ರೀ ಆರ್ ದಯಾನಂದರಾವ್ :- ಮಾನ್ಯ ಸಿಂಧ್ಯಾ ಅವರು ಹೇಳಿದಂತೆ ಪೋಸ್ಟ್‌ಮ್ಯಾನ್‌ಗಳು ದುಡ್ಡು ಹೊಡೆಯುವುದು ನಿಜ. 'ಏಕೆಂದರೆ, ನಮ್ಮ ಕ್ಷೇತ್ರದಲ್ಲಿ ಹೊಸದಾಗಿ ೭೦೦ ಜನಕ್ಕೆ ವೃದ್ಧಾಪ್ಯ ವೇತನವನ್ನು ಕೊಟ್ಟಿದ್ದೇನೆ. ಅವರುಗಳಿಗೆ ೩-೪ ತಿಂಗಳುಗಳಾದರೂ ಸರಿಯಾಗಿ ಹಣ ದೊರಕುತ್ತಿಲ್ಲ. ನಾನು ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ಇದನ್ನು ಪರಿಶೀಲನೆ ಮಾಡಿ ಬ್ಯಾಂಕುಗಳ ಮುಖಾಂತರ ಅಲ್ಲಿ ಅಕೌಂಟ್‌ನ್ನು ಇಟ್ಟು ಕೊಟ್ಟರೆ ಬಡವರಿಗೆ ಒಳ್ಳೆಯದಾಗುತ್ತದೆಂದು ನಾನು ಅಧ್ಯಕ್ಷರ ಮೂಲಕ ತಮಗೆ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಈಗಾಗಲೇ ಇದರ ಬಗ್ಗೆ ಉತ್ತರ ಹೇಳಿದ್ದೇನೆ. ಸಿಟಿಗಳಲ್ಲಿ ಬೇಕಾದರೆ ಬ್ಯಾಂಕುಗಳ ಮೂಲಕ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಎಂ. ಇನಿನಬ್ಬ :- ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಉಪನಾಯಕರಾದಂಥ ಶ್ರೀಯುತ ಸಿಂಧ್ಯಾರವರು ಕೇಳಿದ ಹಾಗೆ ನಾವು ಕೂಡ ಕಳೆದ ಎರಡು ವರ್ಷಗಳಿಂದ ಈ ವಿಚಾರವನ್ನು ಕೇಳುತ್ತಿದ್ದೇವೆ. ವೃದ್ಧಾಪ್ಯ ವೇತನ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ೪-೫ ತಿಂಗಳುಗಳಾದರೂ ಬರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನಸಂಪರ್ಕ ಸಭೆಗಳನ್ನು ಮಾಡಿ ವಿಧವಾ ಮಾಸಾಶನ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನವನ್ನು ಕೊಡಿಸಬೇಕೆಂದು ಎಂ. ಎಲ್. ಎ. ಗಳಾದ ನಮ್ಮನ್ನು ಕೇಳಿಕೊಳ್ಳುತ್ತಾರೆ. ವೃದ್ಧಾಪ್ಯ ವೇತನವು ಸ್ಯಾಂಕ್ಷನ್ ಆಗಿರುವವರಿಗೆ ೪-೫ ತಿಂಗಳುಗಳಾದರೂ ಬರುವುದಿಲ್ಲವೆಂದು ಅವರು ನಮ್ಮ ಹತ್ತಿರ ಒಂದು ಹೇಳುತ್ತಾರೆ. ನಾವು ಹೋಗಿ ಇದರ ಬಗ್ಗೆ ಖಜಾನೆಯಲ್ಲಿ ಕೇಳಿದರೆ ನಮಗೆ ಆದೇಶ ಬರಲಿಲ್ಲವೆಂದು ಹೇಳುತ್ತಾರೆ. ೫೦ ರೂಪಾಯಿ ವೃದ್ಧಾಪ್ಯ ವೇತನವು ಬಡವರಿಗೆ ಸಿಗದೇ ಇರುವ ಕಷ್ಟವನ್ನು ನೋಡಿದರೆ ನಮಗೆ ದುಃಖವಾಗುತ್ತದೆ. ಆದ್ದರಿಂದ, ಕಂದಾಯ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇದರ ಬಗ್ಗೆ ನೋಡಿ ಪ್ರತಿ ತಿಂಗಳೂ ಬಡವರಿಗೆ ಹಣ ಸಿಗುವ ಹಾಗೆ ಮಾಡಿದರೆ ಮಾತ್ರ ಉಪಕಾರವಾಗುತ್ತದೆ. ಆ ರೀತಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇದೆಲ್ಲಾ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಬರುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು 'ಏಕೆ ಈ ರೀತಿ ಹೇಳುತ್ತಿದ್ದಾರೋ ಗೊತ್ತಿಲ್ಲ. ಸೋಷಿಯಲ್ ಡಿಪಾರ್ಟ್‌ಮೆಂಟಿಗೆ ಇದು ಸೇರಿದರೂ ಕೂಡಾ ಒ. ಎ ಪಿ. ಯನ್ನು ಸ್ಯಾಂಕ್ಷನ್ ಮಾಡುವುದು ತಹಶೀಲ್ದಾರ್, ಎ. ಸಿ. ಮತ್ತು ಡಿ. ಸಿ. ಯವರು. ಇವರುಗಳೆಲ್ಲಾ ನಿಮ್ಮ ಇಲಾಖೆಗೆ ಸೇರುತ್ತಾರೆ. ಅದನ್ನು ಡಿಸ್ಪೋಸ್ ಮಾಡುವುದೂ ರೇವಿನ್ಯೂ ಇಲಾಖೆಯವರೇ.

So, the question of discussion with the Social welfare Department does not arise at all.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಇವುಗಳನ್ನೆಲ್ಲಾ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಮೂಲಕ ಕೊಡಲಾಗುತ್ತದೆ ಇವುಗಳನು ಸ್ಯಾಂಕ್ಷನ್ ಮಾಡುವುದು ತಹಶೀಲ್ದಾರ್‌ರವರೇ. ಯಾವುದೇ ಇಲಾಖೆಯ ಕೆಲಸ ಆಗಬೇಕಾದರೂ ಮೊದಲು ತಹಶೀಲ್ದಾರ್‌ರವರಿಗೆ ಒಪ್ಪಿಸಿ ಅನ್ನುತ್ತಾರೆ. ಸೋಷಿಯಲ್ ಡಿಪಾರ್ಟ್‌ಮೆಂಟಿನ ಕೆಲಸ ಇರಲಿ ಹೆಚ್. ಯು. ಡಿ. ಇಲಾಖೆಯಿಂದ ಹೌಸ್ ಸೈಟ್‌ಗಳನ್ನು ಕೊಡುವುದಿರಲಿ ಕೊನೆಗೆ ಇಂಪ್ಲಿಮೆಂಟ್ ಮಾಡುವುದು ತಹಶೀಲ್ದಾರ್‌ರವರೇ. ಅದಕ್ಕೆ ನಾನು ಹೇಳುತ್ತೇನೆ; ಈ ವೃದ್ಧಾಪ್ಯ ವೇತನ ಸರಿಯಾಗಿ ಕೊಡಿಸುವುದರ ಬಗ್ಗೆ ನನಗೂ ಇಂಟರೆಸ್ಟ್ ಇದೆ. ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಓಲ್ಡ್ ಏಜ್ ಪೆನ್‌ಷನ್, ವಿಡೋ ಪೆನ್‌ಷನ್, ತೋಟೆ ತಳವಾರರಿಗೆ ಕೊಡತಕ್ಕಂಥ ಪೆನ್‌ಷನ್ ಸಹ ಎರಡು, ಮೂರು, ಐದು ತಿಂಗಳುಗಳಾದರೂ ಅವರ ಕೈ ಸೇರುವುದಿಲ್ಲ ಅದಕ್ಕೆ ನಾನು ಇದರ ಬಗ್ಗೆ ಸಂಪೂರ್ಣವಾದಂಥ ಒಂದು ತನಿಖೆ ಮಾಡಿಸಿ ಯಾವ ರೀತಿಯಾಗಿ ಪರಿಹಾರ ಕೊಡಬೇಕು ಅನ್ನತಕ್ಕಂಥಾದ್ದನ್ನು ಯೋಜನೆ ಮಾಡಿ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ.

Mr. Speaker : Mr. Patil, with regard to your question No. 1031, Tomorrow there is a short duration discussion on this very subject. So you can take that opportunity and bring whatever you want to the notice of the Government.

ವಿಷಯ :– ಚನ್ನಪಟ್ಟಣದಲ್ಲಿ ಕ. ರಾ. ರ. ಸಾ. ಸಂಸ್ಥೆ ಬಸ್ಸು ನಿಲ್ದಾಣದ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೬೮ (೧೧೩೭)

ಶ್ರೀ ಸದತ್ ಅಲಿ ಖಾನ್ (ಚನ್ನಪಟ್ಟಣ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?